# ಕಥಾಮೃತವೇಕೆ ಅಷ್ಟು ಜನಪ್ರಿಯ?

ಮೂಲ : ಸ್ವಾಮಿ ಸ್ವಾಹಾನಂದ
ಅನುವಾದ : ಡಾ. ಸಿ.ಪಿ.ಕೆ.



ಶ್ರೀರಾಮಕೃಷ್ಣರ ವಚನಗಳಲ್ಲಿ ಜಾತಿ ಮತ ಪಂಥಗಳನ್ನು ಮೀರಿದ ವಿಶ್ವವ್ಯಾಪಕ ಮಾನವತೆ ಮತ್ತು ದೈವಿಕತೆಗಳನ್ನು ಕಾಣುತ್ತೇವೆ. ಅವರ ವಚನವೇದ ಅತ್ಯಂತ ಜನಪ್ರಿಯವಾಗಿರುವುದಕ್ಕೆ ಇದೇ ಕಾರಣ. ಈ ಅಂಶವನ್ನು ವಿದ್ವತ್ಪೂರ್ಣವಾಗಿ ಬಿಂಬಿಸಿರುವ ಸ್ವಾಮೀಜಿಯವರು ಅಮೆರಿಕದ ಹಾಲಿವುಡ್‌ನಲ್ಲಿ ಇರುವ 'ದಕ್ಷಿಣ ಕ್ಯಾಲಿಫೋರ್ನಿಯಾದ ವೇದಾಂತ ಸೊಸೈಟಿ'ಯ ಮುಖ್ಯಸ್ಥರು. ಅವರ ***Vedanta and Ramakrishna'*** ಪುಸ್ತಕದಿಂದ ಇದನ್ನು ಅನುವಾದಿಸಿದವರು ಕನ್ನಡದ ಹೆಸರಾಂತ ಲೇಖಕರಾದ ಡಾ. ಸಿ.ಪಿ. ಕೃಷ್ಣಕುಮಾರ್.

'ಶ್ರೀರಾಮಕೃಷ್ಣ ಕಥಾಮೃತ' (ಮೂಲ ಬಂಗಾಳಿಯಲ್ಲಿ ಅದರ ಹೆಸರು) ಬಂಗಾಳಿ ಸಾಹಿತ್ಯದಲ್ಲಿ ಮಾತ್ರವಲ್ಲ, ಜಗತ್ತಿನ ಆಧ್ಯಾತ್ಮಿಕ ಸಾಹಿತ್ಯದಲ್ಲಿ ಕೂಡ ಒಂದು ಮಹೋನ್ನತ ಕೃತಿ (ಕ್ಲಾಸಿಕ್). ಅದು ಭಾರತ, ಅಮೆರಿಕ ಸಂಯುಕ್ತ ಸಂಸ್ಥಾನಗಳು ಹಾಗೂ ಇತರ ಅನೇಕ ದೇಶಗಳ ಅಧಿಕೃತ ಸಂಘಸಂಸ್ಥೆಗಳ ಮನ್ನಣೆಯನ್ನು ಗಳಿಸಿದೆ. ಅದರ ಜನಪ್ರಿಯತೆಗೆ ಮೂರು ಮುಖ್ಯ ಕಾರಣಗಳಿವೆಯೆಂದು ನನ್ನ ನಂಬಿಕೆ.

**ಒಂದು ಕೃತಿಯ ವಸ್ತು ಚಿರಂತನ ಸ್ವಾರಸ್ಯದ್ದಾಗಿದ್ದರೆ ಅದೊಂದು ಮಹಾಕೃತಿಯಾಗುತ್ತದೆ.** ಪ್ರೇಮ, ಯುದ್ಧ ಮತ್ತು ಸಾಮಾಜಿಕ ಹಾಗೂ ಮನೋವೈಜ್ಞಾನಿಕ ವಿಶ್ಲೇಷಣೆ ಅಂತಹ ಕೆಲವು ಸಾಮಾನ್ಯ ವಸ್ತುಗಳು. ಮಹಾಚೇತನವೊಂದರ ಜೀವನ ಮತ್ತು ಉಪದೇಶಗಳ ಸುತ್ತ ಹುಟ್ಟಿಕೊಂಡ ಆಧ್ಯಾತ್ಮಿಕ ಸಾಹಿತ್ಯ, ಚಿರಂತನವೆಂಬ ಅರ್ಥದಲ್ಲಿ ಪ್ರಭಾವ ಬೀರುತ್ತದೆ; ಏಕೆಂದರೆ ಸಾರ್ವತ್ರಿಕ (universal) ಕಾಳಜಿಗಳನ್ನುಳ್ಳ ಅಧ್ಯಾತ್ಮವೇ ಅದರ ವಸ್ತು. ಲೋಕಾದ್ಯಂತ ಆಧ್ಯಾತ್ಮಿಕ ಅಭೀಪ್ಸುಗಳು ಅದರ ಬೋಧನೆಗಳನ್ನು ಅನುಷ್ಠಾನ ಮಾಡಲು ಸಾಧ್ಯವಾಗುವಂತೆ, ಆಧ್ಯಾತ್ಮಿಕ ಭಾವನೆಗಳನ್ನು ಸಾರ್ವತ್ರಿಕ ಭಾಷೆಯಲ್ಲಿ ಕಥಾಮೃತವು ನಿರೂಪಿಸುತ್ತದೆ.

ಶ್ರೀರಾಮಕೃಷ್ಣರು ಧಾರ್ಮಿಕ ಸಾಮರಸ್ಯವನ್ನು ಪ್ರತಿನಿಧಿಸುತ್ತಾರೆ. ಅವರು ಎಲ್ಲ ಧರ್ಮಗಳ ಸಿಂಧುತ್ವವನ್ನು ಮತ್ತೆ ಮತ್ತೆ ಘೋಷಿಸುತ್ತಾರೆ ಹಾಗೂ ಶಾಸ್ತ್ರಾಂಧತೆಯನ್ನು ನಿರಾಕರಿಸುತ್ತಾರೆ. ಅವರು ಹಿಂದೂಧರ್ಮದಂತೆಯೇ ಇಸ್ಲಾಮ್ ಮತ್ತು ಕ್ರೈಸ್ತ ಧರ್ಮಗಳ ವಿಭಿನ್ನ ಪಂಥಗಳ ಆಧ್ಯಾತ್ಮಿಕ ಪಂಥಗಳನ್ನೂ ವೈಯಕ್ತಿಕವಾಗಿ ಅನುಷ್ಠಾನ ಮಾಡಿ, ಪ್ರಾಮಾಣಿಕವಾಗಿ ಅನುಸರಿಸಿದರೆ ಅವೆಲ್ಲವೂ ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಒಯ್ಯುತ್ತವೆಂಬುದನ್ನು ತನ್ಮೂಲಕ ಕಂಡುಕೊಂಡರು. ಅದರಿಂದ ಧಾರ್ಮಿಕ ಪಂಗಡ, ಪಂಥಗಳಿಗೊಂದು ಅನುಸ್ಯೂತವೂ ಸಿಂಧುವೂ ಆದ ಅಸ್ತಿತ್ವವುಂಟು ಎಂದು ಅವರು ತೋರಿಸಿಕೊಟ್ಟರು. ವೈಮನಸ್ಯ, ವೈರ ಮತ್ತು ಹಿಂಸೆಗಳ ವಾತಾವರಣದಲ್ಲಿ, ವಿವಿಧ ಧರ್ಮಗಳ ಹಿಂದಿರುವ ಏಕತೆಯನ್ನು ತೋರಿಸಿಕೊಟ್ಟಿರುವುದು ಕೂಡ 'ಕಥಾಮೃತ'ದ ದೊಡ್ಡ ಕೊಡುಗೆಗಳಲ್ಲೊಂದು. ಇದು ಸಾಧಿತವಾದದ್ದು ಶ್ರೀರಾಮಕೃಷ್ಣರ ವಾಸ್ತವ ಆಧ್ಯಾತ್ಮಿಕ ಅನುಭವಗಳಿಂದಲೆ ಹೊರತು ಕೇವಲ ಬುದ್ಧಿಯ ಪ್ರದರ್ಶನದಿಂದಲ್ಲ. ಈ ಗ್ರಂಥದಲ್ಲಿ ಮಹಾಚಾರ್ಯನೊಬ್ಬನ ಆಧ್ಯಾತ್ಮಿಕ ಸಾಕ್ಷಾತ್ಕಾರಗಳು ಆತನ ಮಾತುಗಳಿಗೆ ಅಧಿಕೃತತ್ವದ ಗುಣವೊಂದನ್ನು ತಂದುಕೊಟ್ಟು, ಅದ್ಭುತವಾದ ಆನುಭಾವಿಕ ಶಕ್ತಿಯನ್ನು ತುಂಬುವುದನ್ನು ನಾವು ನೋಡಬಹುದು.

ಧಾರ್ಮಿಕ ಸಾಮರಸ್ಯವನ್ನುಂಟುಮಾಡುವ ಪ್ರಯತ್ನಗಳು ಹಿಂದಿನ ದಿನಗಳಲ್ಲಿ ಅನೇಕರಿಂದ ನಡೆದಿದ್ದರೂ, ಈಗ ಸಮಕಾಲೀನ ಮನುಕುಲಕ್ಕೆ ಅದರ ಸಾರಭೂತ ಅಗತ್ಯವು ಹೆಚ್ಚಾಗಿಯೇ ಇದೆ. ಜಗತ್ತಿನ ಜನರು ಪರಸ್ಪರ ಸುಲಭತರ ಸಂವಹನ ಹಾಗೂ ನಿಕಟತರ ಸಾಹಚರ್ಯದಿಂದಾಗಿ ಉದಾರತರ ದೃಷ್ಟಿಯವರಾಗಿದ್ದಾರೆ. ಆದ್ದರಿಂದ ತಮ್ಮ ತರ್ಕವನ್ನು ತಟ್ಟುವ ಮತ್ತು ಮಹಾಸಂತನೊಬ್ಬನ ಆಧ್ಯಾತ್ಮಿಕ ಸಾಕ್ಷಾತ್ಕಾರದ ನೆರವು ಪಡೆದ ಯಾವುದಾದರೊಂದು ಬಗೆಯ ಧಾರ್ಮಿಕ ಸಾರ್ವತ್ರಿಕತೆಗಾಗಿ ಅವರು ಕಾತರರಾಗಿದ್ದಾರೆ. ವಿಭಿನ್ನ ಧರ್ಮಗಳ ಪರಿಚಯ ಆಗಾಗ ನಮ್ಮಲ್ಲಿ ಸಂಶಯಗಳನ್ನು ಹುಟ್ಟಿಸುತ್ತದೆ. ಏಕೆಂದರೆ ಅವು ಅಸಂಗತ ಭಾವನೆಗಳನ್ನು

ಪ್ರತಿನಿಧಿಸುವಂತೆ ತೋರುತ್ತದೆ. ಈ ವಿವಿಧ ಬೋಧನೆಗಳ ಹಿಂದಿರುವ ಸುಸಂಬದ್ಧ ವ್ಯವಸ್ಥೆಯನ್ನು ಕಾಣಲು ವೇದಾಂತ ದರ್ಶನ ನೆರವಾಗುತ್ತದೆ. ಶ್ರೀರಾಮಕೃಷ್ಣರು ಈ ಭಾವನೆಗಳನ್ನು ತಮ್ಮ ಅನುಭವಗಳ ಮೂಲಕ ಸಮನ್ವಯಗೊಳಿಸಿದರು. ಹೀಗಾಗಿ, ಧರ್ಮಸಾರದಲ್ಲಿ ಜನರ ಶ್ರದ್ಧೆ ಬಲಗೊಳ್ಳುತ್ತದೆ ಅಥವಾ ಪುನಃಸ್ಥಾಪಿತವಾಗುತ್ತದೆ.

ಲೌಕಿಕತೆಯನ್ನು ಸಾರುವ ಅಧಾರ್ಮಿಕವಾದ ತತ್ತ್ವಶಾಸ್ತ್ರಗಳು, ಅದರಲ್ಲೂ ಆಧುನಿಕ ರಾಜಕೀಯ ಭಾವನಾಸಮುಚ್ಚಯಗಳು ಆಧ್ಯಾತ್ಮಿಕ ಭಾವನೆಗಳಿಗೆ ಸಂಬಂಧಿಸಿದ ಘರ್ಷಣೆಗಳಿಂದ ಮಾನವ ಮುಕ್ತನಾಗುವ ಆವಶ್ಯಕತೆಯನ್ನು ತ್ವರಿತಗೊಳಿಸಿವೆ. 'ಶ್ರೀ ಶ್ರೀ ರಾಮಕೃಷ್ಣ ಕಥಾಮೃತ' ಈ ಅಗತ್ಯವನ್ನು ನಮ್ಮ ಮುಂದಿರಿಸುತ್ತದೆ. ಅದಲ್ಲದೆ ಸಾಮಾಜಿಕ, ರಾಜಕೀಯ ವಿಪ್ಲವತೆಯ ಪರಿಹಾರಕ್ಕೆ ಮಾತ್ರವಲ್ಲ, ನಮ್ಮ ಆಧ್ಯಾತ್ಮಿಕ ಬದುಕನ್ನು ಗಭೀರಗೊಳಿಸಿಕೊಳ್ಳುವುದಕ್ಕೆ ಕೂಡ ಧಾರ್ಮಿಕ ಸಾಮರಸ್ಯವನ್ನು ಅನುಷ್ಠಾನ ಮಾಡಲು ಅದು ನಮ್ಮನ್ನು ಪ್ರೇರೇಪಿಸುತ್ತದೆ.

**'ಕಥಾಮೃತ'ದ ಜನಪ್ರಿಯತೆಗೆ ಎರಡನೆಯ ಕಾರಣವೆಂದರೆ, ವಸ್ತುನಿರ್ವಹಣೆಯ ಘನವಾದ ತಾಂತ್ರಿಕ ಕೌಶಲ.** ಅದರಲ್ಲಿ ಬಳಸಲಾಗಿರುವ ಆನಂದದಾಯಕ, ಸಂಭಾಷಣಾತ್ಮಕ ವಿಧಾನ, ಪ್ಲೇಟೋ ಬರೆದ ಸಾಕ್ರಟಿಸ್‌ನ ಸಂವಾದಗಳನ್ನು ಸ್ವಾಮಿ ವಿವೇಕಾನಂದರಿಗೆ ಜ್ಞಾಪಿಸಿತು. ತನ್ನನ್ನು ಮರೆಸಿಕೊಂಡು ತನ್ನ ವಿಷಯವಸ್ತುವಾದ ಶ್ರೀರಾಮಕೃಷ್ಣರು ಮಿನುಗಿ ಮಿಂಚುವಂತೆ ಮಾಡಿದ್ದಕ್ಕಾಗಿ ಅವರು 'ಮ'ನನ್ನು ಪ್ರಶಂಸಿಸಿದರು. 'ಕಥಾಮೃತ'ದ ಯಾವುದೇ ಪುಟದಲ್ಲಿ ಯಾರು ಬೇಕಾದರೂ, ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಏನಾದರೂ ಒಂದು ಮಾರ್ಗದರ್ಶನ ಅಥವಾ ಸಲಹೆಯನ್ನು ಕಂಡುಕೊಳ್ಳುವುದು ಸಾಧ್ಯ. ಸರಸವೂ ನೇರವೂ ಆದ ಭಾಷೆಯಲ್ಲಿ ನಿರೂಪಿತವಾದ ಮಹಾನುಭಾವಿಯೊಬ್ಬನ ಅನುಭವಗಳ ಸಾಕ್ಷಾತ್ ಕಥನವನ್ನು ಅದು ಒಳಗೊಂಡಿದೆ. ಶ್ರೀರಾಮಕೃಷ್ಣರು ಪ್ರಾಮಾಣಿಕತೆಯನ್ನು ಅಂದರೆ ಹೃದಯ, ಮನಸ್ಸು, ಮಾತುಗಳ ಸಮನ್ವಯವನ್ನು ಪ್ರತಿಪಾದಿಸಿದರು. 'ಕಥಾಮೃತ'ದಲ್ಲಿ ಅವರು ಮುಕ್ತ ಮನಸ್ಸಿನ, ಮನಂಬುಗುವ ವ್ಯಕ್ತಿಯಾಗಿದ್ದಾರೆ. ದುರ್ಬಲರ ಮತ್ತು ಅಧ್ಯಾತ್ಮ ಜೀವನದಲ್ಲಿ ಹಿಂದುಳಿದವರ ಬಗೆಗೆ ಅವರಿಗಿದ್ದ ಸಹಾನುಭೂತಿ ಮಹಾಬೋಧಕರೊಬ್ಬರಿಗೆ ವಿಶಿಷ್ಟವಾದುದಾಗಿತ್ತು. ಜನರನ್ನು ಕುರಿತ (ಅವರ ಜೀವನರಂಗ ಯಾವುದೇ ಆಗಿರಲಿ) ಶ್ರೀರಾಮಕೃಷ್ಣರ ಅಪಾರ ಪ್ರೀತಿ, ಸಹಾನುಭೂತಿಗಳನ್ನು 'ಕಥಾಮೃತ' ತೋರ್ಪಡಿಸುತ್ತದೆ. ಒಬ್ಬ ವ್ಯಕ್ತಿಯ ಆಧ್ಯಾತ್ಮಿಕತೆಯ ಮಟ್ಟ ಯಾವುದೇ ಇರಲಿ, ಅವನು ಪ್ರಾಮಾಣಿಕನಾಗಿದ್ದು ಮುಕ್ತ ಮನಸ್ಸಿನಿಂದ ಭಗವಂತನಿಗೆ ಪ್ರಾರ್ಥನೆ ಸಲ್ಲಿಸಿದರೆ ಪ್ರಗತಿ ಹೊಂದುತ್ತಾನೆಂದು ಬೋಧಿಸಿದರು, ಶ್ರೀರಾಮಕೃಷ್ಣರು. ಅವರ ಪಾಲಿಗೆ ಧರ್ಮವೆನ್ನುವುದು ಅನುಭವವಾಗಿತ್ತು.

'ಶ್ರೀ ಶ್ರೀ ರಾಮಕೃಷ್ಣ ಕಥಾಮೃತ' ದ ಇಂಗ್ಲಿಷ್ ಆವೃತ್ತಿಯನ್ನು ಸ್ವಾಮಿ ನಿಖಿಲಾನಂದರು ಕಾಲಾನುಕ್ರಮೇಣ ಮರುಜೋಡಣೆ ಮಾಡಿದ್ದಾರೆ. ಪ್ರತಿಯೊಂದು ಮಹಾಸಾಹಿತ್ಯಕೃತಿಯಲ್ಲೂ ವರ್ಣನೆಯ ಮತ್ತು ಏಕತಾನತೆಯ ತಾಣಗಳಿರುತ್ತವೆ ಎನ್ನುತ್ತಾರೆ, ಬರ್ಟ್ರಂಡ್ ರಸಲ್. 'ಕಥಾಮೃತ'ದ ಐದು ಭಾಗಗಳಲ್ಲಿ ಸಹಜವಾಗಿ ಪುನರಾವರ್ತನೆಗಳಿವೆ. ಆದರೆ ಉಪನಿಷತ್ತುಗಳು ಉಪದೇಶಿಸುವಂತೆ, ಆಧ್ಯಾತ್ಮಿಕ ಸತ್ಯಗಳನ್ನು ಮತ್ತೆ ಮತ್ತೆ ಕೇಳಬೇಕು, ಆಲೋಚಿಸಬೇಕು ಮತ್ತು ಧ್ಯಾನಿಸಬೇಕು. 'ಕಥಾಮೃತ' ವನ್ನು ಒಂದೇ ಸಲಕ್ಕೆ ಓದಿ ಮುಗಿಸಬೇಕಾದ್ದಿಲ್ಲ, ಭಾವನೆಗಳನ್ನು ಹೀರಿಕೊಂಡು ಅವನ್ನು ನಮ್ಮವನ್ನಾಗಿ ಮಾಡಿಕೊಳ್ಳಲು ಪ್ರತಿನಿತ್ಯವೂ ಅದರ ಕೆಲವು ಪುಟಗಳ ವಾಚನ ನಮಗೆ ನೆರವಾಗುತ್ತದೆ.

**'ಕಥಾಮೃತ' ದ ಜನಪ್ರಿಯತೆಗೆ ಮೂರನೆಯ ಕಾರಣವೆಂದರೆ, ಶ್ರೀರಾಮಕೃಷ್ಣರು ಬದುಕಿ, ಮಾತನಾಡಿದ ಆವರಣದ ವಿವರಪೂರ್ಣ ವರ್ಣನೆಗಳನ್ನು ಕೊಡುವ ಕೌಶಲ.** ಇದು, ಕುಳಿತು ಅಥವಾ ನಿಂತು ಭಕ್ತ ಸಮಾವೇಶದೊಡನೆ ಮಾತನಾಡುತ್ತಿರುವ ಶ್ರೀರಾಮಕೃಷ್ಣರ ಜೀವಂತವಾದ ಮತ್ತು ಕಣ್ಣಿಗೆ ಕಟ್ಟುವ ಚಿತ್ರವನ್ನು ಮೂಡಿಸಿಕೊಳ್ಳಲು ನಮಗೆ ನೆರವಾಗುತ್ತದೆ. ಅವರ ಭಾವಚಿತ್ರವನ್ನು ತೆಗೆಯಲಾಗಿದೆ; ಅವರ ಲಕ್ಷಣಗಳು ತಿಳಿದುಬಂದಿವೆ. ಅವರು ಹೇಗೆ ಬದುಕಿದರು, ನಡೆದಾಡಿದರು, ಮಾತನಾಡಿದರು, ವಸ್ತ್ರ ಧರಿಸಿದ್ದರು – ಈ ಎಲ್ಲ ಸಂಗತಿಗಳೂ ಸೂಕ್ಷ್ಮವಾಗಿ ಕಥಾಮೃತದಲ್ಲಿ ದಾಖಲೆಗೊಂಡಿದ್ದು, ನಮಗವರು ಬಹಳ ವಾಸ್ತವವಾಗಿ ಮತ್ತು ನಿಕಟವಾಗಿ ತೋರುವಂತೆ ಮಾಡಿದೆ.

ಕರ್ತೃವಿನ ಮರಣದ ಕೇವಲ ಐವತ್ತು ವರ್ಷಗಳೊಳಗೆ 'ಶ್ರೀ ಶ್ರೀ ರಾಮಕೃಷ್ಣ ಕಥಾಮೃತ' ವು ಒಂದು ವಿಶ್ವವ್ಯಾಪಕ ಆಧ್ಯಾತ್ಮಿಕ ಮಹಾಕೃತಿಯಾಗಿ ಪರಿಣಮಿಸಿದೆ. ವಿಶ್ವಸಾರ್ವತ್ರಿಕ ಧಾರ್ಮಿಕ ಸಹಬಾಳ್ವೆಯೇ ಅದರ ವಸ್ತು. ಅದು ವ್ಯಕ್ತಿಗತ ಶಾಂತಿಯದ್ದು ಮಾತ್ರವಲ್ಲ, ಜಾಗತಿಕ ಶಾಂತಿಯ ಬೀಜಗಳನ್ನೂ ಒಳಗೊಂಡಿದೆ. ಆಧ್ಯಾತ್ಮಿಕ ಬದುಕಿನ ಬಗೆಗಿನ ಅದರ ಅನುಕಂಪಯುತ ಆದರೆ ರಾಜಿರಹಿತ ಉಪದೇಶಗಳು ಸಾಧಕರಿಗೆ ಪ್ರೋತ್ಸಾಹವನ್ನೂ ಸ್ಫೂರ್ತಿಯನ್ನೂ ನೀಡುತ್ತವೆ. ಇದರಲ್ಲಿ ಬರುವ ಶ್ರೀರಾಮಕೃಷ್ಣರ ಆಪ್ತ ದೈನಂದಿನ ಬದುಕಿನ ಚಿತ್ರವು ಸನಾತನ ಧಾರ್ಮಿಕ ಸತ್ಯಗಳ ಜೀವಂತ ಮೂರ್ತರೂಪವೊಂದರ ಸಂಪರ್ಕದ ಪ್ರಜ್ಞೆಯನ್ನುಂಟುಮಾಡುತ್ತದೆ. ಹೀಗೆ ಶ್ರೀರಾಮಕೃಷ್ಣ ಕಥಾಮೃತ ಪ್ರತಿಯೊಬ್ಬ ಆಧುನಿಕ ಆಧ್ಯಾತ್ಮಿಕ ಅಭೀಪ್ಸುವಿನ ಹೃದಯದೊಡನೆ ಸಂವಾದ ಮಾಡುತ್ತ, ಅವನ ಶ್ರದ್ಧೆಯನ್ನು ನವೀಕರಿಸಿ ಬಲಗೊಳಿಸುತ್ತದೆ ಹಾಗೂ ಆಧ್ಯಾತ್ಮಿಕ ಸಾಕ್ಷಾತ್ಕಾರದ ಅತ್ಯುನ್ನತ ಆದರ್ಶಗಳಿಗಾಗಿ ಶ್ರಮಿಸುವ ಕೆಚ್ಚನ್ನು ಅವನಲ್ಲಿ ತುಂಬುತ್ತದೆ.

★